ಶ್ರೀ ಜಿ. ವಿ. ಅಂಜನಪ್ಪ.—67ನೇ ಇಸವಿಯಲ್ಲಿ ಈ ದೇಶದ ಹೊರಗಡೆ ಮಂತ್ರಿಗಳು ಪ್ರವಾಸ ಹೋಗಿದ್ದು ಯಾವ ಯಾವ ಕಾರಣಗಳಿಗಾಗಿ ಎನ್ನುವ ವಿವರಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಯಾವ ಕೆಲಸಗಳಿಗೆ ಹೋಗಿದ್ದರು ಎನ್ನುವುದನ್ನು ಬೇಕಾದರೆ ಕೊಡಬಹುದು.

ಶ್ರೀ ಜಿ. ವಿ. ಅಂಜನಪ್ಪ.—ನನ್ನ ಉದ್ದೇಶ ಪ್ರಶ್ನೆ ಕೇಳುವುದಕ್ಕೆ, ಯಾವ ಯಾವ ನರಕಾರದ ಕೆಲಸಗಳಿಗಾಗಿ ದೇಶದಿಂದ ಹೊರಕ್ಕೆ ಮಂತ್ರಿಗಳು ಪ್ರವಾಸ ಹೋಗಿದ್ದರು ಎನ್ನುವುದರ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವಶ್ಯವಿದ್ದರೆ ಕೊಡಬಹುದು. ಇದು ಬಹಳ ಉದ್ದವಾಗಿರುವ ಪಟ್ಟಿ ಮಾನ್ಯ ಸದಸ್ಯರಿಗೆ ಬೇಕಾದರೆ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಿ. ವಿ. ಅಂಜನಪ್ಪ.—ಮೈಸೂರು ದೇಶದಿಂದ ಹೊರಗಡೆಗೆ ಪ್ರವಾಸ ಹೋದ ಉದ್ದೇಶವೇನು ? ಪರದೇಶಗಳಿಂದ ಹೋಗಿ ಬಂದುದಕ್ಕೆ ನಮ್ಮ ದೇಶಕ್ಕೆ ಆಗಿರುವ ರಾಭಗಳೇನು ?

ಶ್ರೀ ಎಸ್. ನಿಜಲಿಂಗಪ್ಪ.—ಪರದೇಶಗಳಿಗೆ ಹೋದ ಮಂತ್ರಿಗಳಲ್ಲೂ ಒಂದು ಈ ಪಟ್ಟಿಯಲ್ಲಿದೆ. ಅದು ಅನಿಮರ್ ಹಸ್‌ಬೆಂಡ್ರಿ ಮಂತ್ರಿಗಳದ್ದು. ಅವರನ್ನು ಪರದೇಶಗಳವರು ಇಲ್ಲಿಗೆ ಬಂದಾಗ ಕರೆದಿದ್ದರು. ಆ ಆಹ್ವಾನದ ಮೇಲೆ ಅವರು ಹೊರದೇಶಗಳಿಗೆ ಪ್ರವಾಸ ಹೋಗಿ ಬಂದರು. ಇಲ್ಲಿರುವ ಅನಿಮರ್ ಹಸ್‌ಬೆಂಡ್ರಿ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮ ದೇಶಗಳಲ್ಲಿರುವ ಪದ್ಧತಿಗಳನ್ನು ನೋಡಿಕೊಂಡು ಬಂದರೆ ಇನ್ನೂ ಹೆಚ್ಚು ಪ್ರಯೋಜನವಾಗುತ್ತದೆ, ಎಂದು ಇವರನ್ನು ಕರೆದದ್ದರಿಂದ ಅವರು ಪ್ರವಾಸ ಹೋಗಿದ್ದರು. ಹಾಗೆ ಅವರು ಕರೆದಾಗ ಅವರಿಗೆ ಹೋಗತಕ್ಕ ಖರ್ಚು ಮತ್ತು ಬರತಕ್ಕ ಖರ್ಚು ಪರದೇಶಗಳವರ ಮೇಲೆ ಹಾಕಕೂಡದು ಎನ್ನುವುದು ಒಂದು ತತ್ವ, ಅದರಂತೆ ಅವರ ಖರ್ಚನ್ನು ನಾವೇ ವಹಿಸಿಕೊಂಡಿದ್ದೇವೆ.

ಶ್ರೀ ಜಿ. ವಿ. ಅಂಜನಪ್ಪ.—ಮಂತ್ರಿಗಳು ವರ್ಷದಲ್ಲಿ ಪ್ರವಾಸ ಮಾಡುವಾಗ ಇಷ್ಟೇ ಟಿ.ಎ. ಹಾಗೂ ಡಿ.ಎ. ತೆಗೆದುಕೊಳ್ಳಬೇಕೆಂದು ನಿಗದಿಯಾಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಿಗದಿಯಾಗಿಲ್ಲ. ಹಾಗೆ ನಿಗದಿ ಮಾಡತಕ್ಕದ್ದು ಒಳ್ಳೆಯದಲ್ಲ.

ಶ್ರೀ ಗಾಂಜಿ ವೀರಪ್ಪ.—ಮಂತ್ರಿಗಳು ಪರದೇಶಕ್ಕೆ ಹೋಗಿ ಅಲ್ಲಿನ ಅಭಿವೃದ್ಧಿ ಕೆಲಸಗಳು ಹೇಗೆ ಆಗಿವೆ ಎನ್ನುವುದನ್ನು ನೋಡಿ ನಮ್ಮ ದೇಶದಲ್ಲೂ ಅದೇ ರೀತಿ ಅಭಿವೃದ್ಧಿ ಮಾಡಲು ತಕ್ಕ ಕ್ರಮಗಳನ್ನು ಮಾಡಬಹುದು. ಇದರಿಂದ ಪರದೇಶಗಳಿಗೆ ಮಂತ್ರಿಗಳು ಪ್ರವಾಸ ಹೋಗುವುದು ಅವಶ್ಯಕವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅತ್ಯಂತ ಅವಶ್ಯಕ.

Lift Irrigation in Challakere Taluk

89. Sri G. V. ANJANAPPA (Graduates' Constituency).—

Will the Minister for Public Works be pleased to state :—

(*a*) the number of Lift Irrigation projects sanctioned in Challakere taluk ;

(*b*) when they were sanctioned ;

(*c*) the estimated amount of each scheme ;

(*d*) the area that is going to be brought under cultivation ;

(*e*) if they are delayed, the reasons thereof ?

A.—Sri VEERENDRA PATIL (Minister for Public Works) [On behalf of SRI ALUR HANUMANTHAPPA (Deputy Minister for Minor Irrigation)].—

(*a*) Nil.

(*b*), (*c*), (*d*) and (*e*) Does not arise in view of reply to clause (*a*).

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಒಂದು ಸಾರಿ ಚಳ್ಳಕೆರೆ ತಾಲ್ಲೂಕಿನಲ್ಲಿ ನಾಲ್ಕೈದು ಲಫ್ಟ್ ಇರಿಗೇಷನ್ ಕೆಲಸಗಳು ಮಂಜೂರಾಗಿದ್ದವು ಎಂದು ಹೇಳಿದ್ದೀರಿ. ಇಂದು ಉತ್ತರ ಕೊಡುವಾಗ ಯಾವುದೂ ಇಲ್ಲ ಎನ್ನುವುದಕ್ಕೆ ಕಾರಣವೇನು ?

† ಶ್ರೀ ವೀರೇಂದ್ರ ಪಾಟೀರ್.—ಈ ತಾಲ್ಲೂಕಲ್ಲಿ ಮೊದಲಿಗೆ ಆರು ಕೆಲಸಗಳನ್ನು ಸ್ಯಾಂಕ್ಷನ್ ಮಾಡಲಾಗಿತ್ತು. ಇದರಲ್ಲಿ ಕೆಲವು ಸ್ಕೀಂಗಳು ಮಾಡುವಾಗ ಬೇರ್ಯಾಳ್ ಹಾಗೂ ನಾರಾಯಣಪುರ ಕಟ್ಟೆಬಳಿ ವಾಟರ್ ಸ್ಪೆಡ್ ಏರಿಯಾದಲ್ಲಿ ಇಂಟರ್ ಸ್ಟೇಟ್ ಟ್ರಬರ್ ಬರುತ್ತೆ ಎಂದು ಅವುಗಳನ್ನು ಮಾಡಲಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಬನವಾಪುರ, ಮೈಲನಹಳ್ಳಿ ಹಾಗೂ ಇನ್ನೆರಡು ಗ್ರಾಮಗಳಲ್ಲಿ ಲಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಇತ್ತು. ಆದರೆ ಈಗ ಯಾವುದೂ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇಲ್ಲಿ ಯಾವುದನ್ನಾದರೂ ತೆಗೆದುಕೊಳ್ಳುತ್ತಾರೋ ಇಲ್ಲವೋ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಲಫ್ಟ್ ಇರಿಗೇಷನ್ ಸ್ಕೀಂಗಳಾಗಿ ಆರನ್ನು ಇಲ್ಲಿ ತೆಗೆದುಕೊಳ್ಳಬೇಕೆಂದು ಇತ್ತು. ಇಲ್ಲಿ ಇಂಟರ್ ಸ್ಟೇಟ್ ಕಷ್ಟಗಳು ಬರಬಹುದು, ಇದಕ್ಕೆ ಬದಲು ರೆಸ್ಟೊರೇಷನ್ ಆಫ್ ನನ್ನಿಹಾಳ್ ಟ್ಯಾಂಕ್, ರೆಸ್ಟೊರೇಷನ್ ಆಫ್ ಬೇರನಹಳ್ಳಿ ಟ್ಯಾಂಕ್ ಮತ್ತು ಮುಂದನವಾಗಪ್ಪನ ಕಟ್ಟೆ ಇವುಗಳನ್ನು ಮಾಡಲು ನುಮಾರು ಒಂದು ಲಕ್ಷ ರೂಪಾಯಿಗಳಾಗುವಷ್ಟು ಕೆಲಸಗಳು ಲಫ್ಟ್ ಇರಿಗೇಷನ್‌ಗೆ ಬದಲಾಗಿ ತೆಗೆದುಕೊಳ್ಳಬಹುದೇ ಎನ್ನುವುದನ್ನು ವಿಚಾರ ಮಾಡುತ್ತಿದ್ದೆವು. ತೆಗೆದು ಕೊಳ್ಳುವಾಗ ವಾಟರ್ ಸ್ಪೆಡ್ ಏರಿಯಾ ಹತ್ತಿರ ಇಂಟರು ಸ್ಟೇಟ್ ಟ್ರಬರ್ಸ್ ಇದರಲ್ಲಿ ಬರುವುದರಿಂದ ಇದನ್ನು ಕೈಬಿಡರಾಯಿತು.

Sri V. SRINIVASA SHETTY.—Is there any possibility of taking up any work by way of lift irrigation in this district ?

Sri VEERENDRA PATIL.—Wherever possible and wherever there is potential for lift irrigation, we shall certainly take up.

Sri V. SRINIVASA SHETTY.—Have your Department investigated the possibility of taking up any lift irrigation in this district ?

Sri VEERENDRA PATIL.—We have got an Investigation Division with separate staff for that purpose. They are investigating. I do not have the list which has been, investigated by them. I will get that list and if I find that any lift irrigation is possible in that area, I will certainly try to have them included.

ಶ್ರೀ ಜಿ. ವಿ. ಆಂಜನಪ್ಪ.—ಹಿಂದೆ ಬನವಾಪಟ್ಟಣದ ಬಳಿ ಇರುವ ವೇದಾವತಿ ನದಿಗೆ ಮೇಲನ ಹಳ್ಳಿ ಹತ್ತಿರ ಒಂದು ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲಫ್ಟ್ ಇರಿಗೇಷನ್‌ಗಾಗಿ ಅಂದಾಜುಗಳನ್ನು ತಯಾರು ಮಾಡಿದ್ದರು ಮತ್ತು ಆಗಲೇ ಮಂಜೂರು ಆಗಿದ್ದವು. ಈಗ ಯಾವುದೂ ಇಲ್ಲ ಎಂದರೆ ಇಲ್ಲಿ ಲಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಲು ಅಸಾಧ್ಯವೇ ಹೇಗೆ ?

ಶ್ರೀ ವೀರೇಂದ್ರ ಪಾಟೀರ್.—ಹಿಂದೆ ಮಂಜೂರು ಮಾಡಿತ್ತು. ಬನವಾಪಟ್ಟಣ ಹಾಗೂ ಬಾದಿಹಳ್ಳಿದ ಬಳಿ ಮಾಡಬೇಕೆಂದು ಇತ್ತು. ಇದನ್ನು ಎಕ್ಸಿಕ್ಯೂಟ್ ಮಾಡುವಾಗ ಬೈರಾಪುರದ ಬಳಿ ಇಂಟರ್ ಸ್ಟೇಟ್ ಏರಿಯಾ ಬರುತ್ತೆ ಎನ್ನುವ ಕಾರಣಗಳಿಂದಾಗಿ ಇದನ್ನು ಕೈಬಿಡರಾಯಿತು.

†Indicates that remarks or speeches have not been revised by the member concerned.

ಶ್ರೀ ಗಾಂಜಿ ವೀರಪ್ಪ.—ನದಿಗಳಿಂದ ನೀರನ್ನು ತೆಗೆದುಕೊಳ್ಳುವಾಗ ಈಚೆಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಹೆಚ್ಚು ಡಿಪಾಸಿಟ್ಟುಗಳನ್ನು ಕೊಡಬೇಕೆಂದು ಕೇಳುತ್ತಿರುವುದರಿಂದ ಕಷ್ಟವಾಗುತ್ತಿದೆ. ಇಂತಹ ಕಷ್ಟಗಳು ಎಲ್ಲೆಲ್ಲಿವೆ ಅವುಗಳನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇರಿಗೇಷನ್ ನಲುವಾಗಿ ಒಂದು ಅಶ್ವಶಕ್ತಿವಿದ್ಯುಚ್ಛಕ್ತಿಗೆ ತೆಗೆದುಕೊಳ್ಳುವಾಗ ಒಂದು ಸಾವಿರ ಕೊಡಬೇಕೆಂದು ಇದೆ. ಇದನ್ನು ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ. ಇದರಲ್ಲಿ ಏನಾದರೂ ಕಷ್ಟಗಳು ಬಂದರೆ ಆಗಂಡೆ ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ವಿ. ಆಂಜನಪ್ಪ.—ಲಿಫ್ಟ್ ಇರಿಗೇಷನ್ ಮುಖಾಂತರ ನೀರು ತೆಗೆದುಕೊಳ್ಳಬೇಕು ಎಂದು ಒಪ್ಪಂದದಲ್ಲಿ ಅಡಕವಾಗಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಒಪ್ಪಂದವನ್ನು ನೋಡಬೇಕು.

ಶ್ರೀಮತಿ ಎಂ. ಆರ್. ಲಕ್ಷಮ್ಮ.—ಈ ಲಿಫ್ಟ್ ಇರಿಗೇಷನ್ನಿಗೆ ಬೇಕಾಗುವಂಥ ಮೆಷಿನರಿ ಆಕ್ಸೆಸರೀಸ್, ಸ್ಪೇರ್ ಪಾರ್ಟ್ಸ್ ಸಾಕಷ್ಟು ಪ್ರಮಾಣದಲ್ಲಿ ಒದಗಿಸಲಾಗುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಯೋಜನೆಗೆ ಏನೇನು ಬೇಕು ಎನ್ನುವುದಕ್ಕೆ ಇಂಜಿನಿಯರುಗಳು ಡಿಸೈನ್ ಮಾಡುತ್ತಾರೆ. ಅದಕ್ಕೆ ಬೇಕಾಗುವ ಸಾಮಾನುಗಳನ್ನು ತರಿಸಿದರೆ ಕಲ್ರ್ಯಾಕ್ಟರ್ ಕಂಪನಿ ನರಬರಾಜು ಮಾಡುತ್ತಾರೆ.

Mr. CHAIRMAN.—Question Nos. 90, 91 and 92 are held over. We shall go to the next question.

Implementation of Second Interim Report

93. Sri M. V. VENKATAPPA (Graduates' Constituency).—

Will the Minister for Finance, Planning and Commerce and Industries be pleased to state :—

(*a*) whether the Government has considered the suggestion submitted by the Pay Commission with regard to resources for the implementation of the second interim report ;

(*b*) the action taken by the Government to implement the Second Interim Report ?

A.— Sri RAMAKRISHNA HEGDE (Minister for Finance, Planning and Commerce and Industries).—

(*a*) No suggestion has been made by the Pay Commission with regard to resources in the second interim report.

(*b*) Reference is invited to pages 40 to 43 of the Budget Speech delivered by the Finance Minister.

ಶ್ರೀ ಎಂ. ವಿ. ವೆಂಕಟಪ್ಪ.—ಸರಕಾರಿ ನೌಕರರಿಗೆ ಕೊಟ್ಟಿರುವ ತುಟ್ಟಿ ಭತ್ಯವನ್ನು ಬೇರೆ ರೂಪದಲ್ಲಿ ಕೊಡದೆ ನಗದು ಕೊಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಂಪೂರ್ಣವಾಗಿ ನಗದು ಆಗಿ ಕೊಟ್ಟರೆ, ನಾನು ಈ ಮೊದಲೇ ಹೇಳಿದ ಹಾಗೆ ಎರಡು ತರಹದ ತೊಂದರೆ ಉಂಟಾಗುತ್ತದೆ. ಮೊದಲನೆಯದಾಗಿ ಸರಕಾರದ ಹಣ ಹೊರಗಡೆ ಹೋಗುತ್ತದೆ ಹಾಗು ಎರಡನೆಯದಾಗಿ ಸಂಪೂರ್ಣವಾಗಿ ಲಾಭ ಸರಕಾರಿ ನೌಕರರಿಗೆ ಸಿಕ್ಕುವುದಿಲ್ಲ. ಇದರಿಂದ ಧಾರಣೆ ಹೆಚ್ಚಾಗುತ್ತವೆ.